

# ವಿವೇಕ

ನೆನಪಿಸಿಕೊಳ್ಳಬೇಕಾಗಿ ಬಂದಿದೆ ಈಗ
ಬಿಡಿಬಿಡಿಸಿ ತಿಳಿತಿಳಿಸಿ ಹೇಳಬೇಕಾಗಿದೆ
ದುರ್ದೈವ
ನಾವು ಮಾನವರು
ಮನುಕುಲದ ದೀಪಕರು
ಹಾಗೆ ಹೇಳಿಕೊಂಡಿದ್ದವರು...

ಗಂಡು ಹೆಣ್ಣುಗಳು
ತಂದೆ ತಾಯಿ ಸೋದರ ಸೋದರಿಯರು
ಪ್ರೀತಿ ಅನ್ನರಸ ಸವಿದವರು, ಸಂಬಂಧ ಸ್ನೇಹ ಸೂಸಿದ್ದವರು
ನಾವು ಮನುಜರು

ನಮ್ಮನ್ನು
ಜಾತಿ ಮತ ಕಟ್ಟು ಪಾಡುಗಳಲ್ಲಿ ಮುಳ್ಳು ಬೇಲಿಗಳಲ್ಲಿ
ಭಾಷೆ ದೇಶ ಪಂಗಡದ ಇಕ್ಕಟ್ಟು
ಹಾದಿ ಬೀದಿ ಗಲ್ಲಿಗಳಲ್ಲಿ ಬಂಧಿಸುತ್ತಿರುವವರು ಯಾರು
ನಾವೆ? ನಮ್ಮವರೆ?
ಯಾಕೆ ಬಿಗಿಯುತ್ತಿದ್ದಾರೆ ಹುಗಿಯುತ್ತಿದ್ದಾರೆ
ನಮ್ಮತನ ನಮ್ಮ ಹೃದಯ ಮನ
ಒಡೆಯುತ್ತಿದ್ದಾರೆ ಯಾಕೆ?

ನಾವು ಆರಾಧಿಸಿದ ಹೃದಯ ಭಾವ
ಚರ್ಚು ಗುರುದ್ವಾರ ಮಂದಿರ ಮಸೀದಿ
ಶ್ರದ್ಧಾಲಯ ಯಾರು ಆಕ್ರಮಿಸುತಿದ್ದಾರೆ?

ಈ ಆಕ್ರಮಣಕಾರರೇ
ನಮ್ಮನ್ನು ಹೃದಯ ಸಂಪತ್ತನ್ನು ದೋಚಿದ್ದಾರೆ
ಎರವಲು ಬುದ್ಧಿ ಬಳಸಿ ಹಳ್ಳ ಹೊಂಡಗಳಲ್ಲಿ ಹಂಚಿದ್ದಾರೆ
ಹೊಂಚಿ ಕೊರೆದಿದ್ದಾರೆ
ವಿನಯ ವಿವೇಕ ನಮ್ಮತನ ಹಿಸುಕಿ ಹಿಂಡಿದ್ದಾರೆ
ಭಯದ ಗೋಡೆಗಳ ನಡುವೆ ಸಿಲುಕಿಸಿದ್ದಾರೆ

ಮನುಷ್ಯತ್ವವೇ ಧರ್ಮ, ಜಾತಿ ಗಂಡು ಹೆಣ್ಣು;
ಭಾಷೆ ದೇಶ ಪ್ರದೇಶ ಮಾತ್ರ ನಮ್ಮ ಮತ ಮತಗಳೆ?
ನುಡಿ ನಡೆಗಳು ಭಿನ್ನ ಬೇರೆ ಸಹಜ

